ಅ) ಹೌದು.

ಆ) ಮಂಡಳಿಯ ಪರಿಶೀಲನೆಯಲ್ಲಿದೆ

ಇ) ಹೌದು

ಈ) ಈ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಶೀಘ್ರವಾಗಿ ಕ್ರಮ ತೆಗೆದುಕೊಳ್ಳಲಾಗುವುದು.

ಸೇಡಂ ತಾಲ್ಲೂಕಿನ ಕಾಗಿನ ನದಿಗೆ ಏತ ನೀರಾವರಿ ಯೋಜನೆ

668 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಕುರಕುಂಟಾ, ಹಯ್ಯಾಳ, ತೆಲ್ಕೂರು ಇತ್ಯಾದಿ ಗ್ರಾಮಗಳ ಸಮೀಪ ಕಾಗಿನ ನದಿಗೆ ಏತ ನೀರಾವರಿ ಯೋಜನೆಗಳು ಮಂಜೂರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *1992-93ನೇ ಸಾಲಿನಲ್ಲಿ ಮಂಜೂರಾಗಿರುವ ಏತ ನೀರಾವರಿ ಯೋಜನೆಗಳಿಗೆ ಸಂಬಂಧಿಸಿದ ನಿಬಂಧನೆಗಳನ್ನು ಫಲಾನುಭವಿಗಳು ಒಪ್ಪಲು ತಯಾರಿದ್ದರೂ ಸಹಾ ಇಲ್ಲಿಯವರೆವಿಗೂ ಪ್ರಾರಂಭ ಮಾಡದಿರಲು ಕಾರಣವೇನು?*

ಇ) *ಈ ವರ್ಷ ಸಣ್ಣ ನೀರಾವರಿ ಇಲಾಖಾವತಿಯಿಂದ ಪ್ರಾರಂಭ ಮಾಡಲಾಗುತ್ತದೆ ಎಂದು ಮಾಹಿತಿ ನೀಡಿ ಈವರೆಗೆ ಕಾಮಗಾರಿಯನ್ನು ಕೈಗೊಳ್ಳದಿರುವುದಕ್ಕೆ ಕಾರಣಗಳೇನು?*

ಈ) *ಮಂಜೂರಾಗಿರುವ ಈ ಯೋಜನೆಗಳನ್ನು ಪ್ರಾರಂಭ ಮಾಡಿ ಆ ಭಾಗದ ಬಡ ರೈತರಿಗೆ ನೀರಾವರಿ ಅನುಕೂಲ ಮಾಡಿ ಕೊಡಲಾಗುವುದೇ?*

ಉ) *ಹಾಗಿದ್ದಲ್ಲಿ ಯಾವಾಗ?*

ಡಾ ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಕುರಕುಂಟಾ, ಹಯ್ಯಾಳ ಗ್ರಾಮಗಳ ಬಳಿ ಕಾಗಿನಾ ನದಿಗೆ ಏತ ನೀರಾವರಿ ಯೋಜನೆಗಳನ್ನು ಕೃಷ್ಣಾ ಜಲಾನಯನ ಏತ ನೀರಾವರಿ ನಿಗಮ, ಬಿಜಾಪುರ ಇವರಿಂದ ಕೈಗೊಳ್ಳಲು ಉದ್ದೇಶಿಸಿದ್ದು, ಸದರೀ ಯೋಜನೆಗಳಿಂದ ನೀರಾವರಿಯಾಗುವ ಅಚ್ಚುಕಟ್ಟು ಪ್ರದೇಶವು ಉದ್ದೇಶಿತ ಕಾಗಿನ ನೀರಾವರಿ ಯೋಜನೆ ಎಡಹಳ್ಳಿ ಮುಳುಗಡೆ ಪ್ರದೇಶದಲ್ಲಿ ಬರುವುದರಿಂದ, ಈ ಯೋಜನೆಗಳನ್ನು ಕೈಬಿಡಲು ನಿರ್ಧರಿಸಿದೆ. ಸೇಡಂ ತಾಲ್ಲೂಕಿನ ತೆಲ್ಕೂರು ಏತ ನೀರಾವರಿ ಯೋಜನೆಯು ಇನ್ನೂ ಅನ್ವೇಷನಾ ಹಂತದಲ್ಲಿರುತ್ತದೆ.

ಆ) 1992-93ನೇ ಸಾಲಿನಲ್ಲಿ ನಬಾರ್ಡ್‌ನಿಂದ ಒಟ್ಟು ಎಂಟು ಏತ ನೀರಾವರಿ ಯೋಜನೆಗಳು ಮಂಜೂರಾತಿ ಪಡೆದಿದೆ. ಅವುಗಳಲ್ಲಿ ಆರು ಏತ ನೀರಾವರಿ ಯೋಜನೆಗಳ ಕೆಲಸವನ್ನು ಈಗಾಗಲೇ ಪ್ರಾರಂಭಿಸಲಾಗಿದೆ. ಆದರೆ ಮೇಲೆ ತಿಳಿಸಿರುವ ಮೂರು ಏತ ನೀರಾವರಿ ಯೋಜನೆಗಳು ಸೇರಿರುವುದಿಲ್ಲ.

ಇ) ಕೃಷ್ಣಾ ಜಲಾನಯನ ಏತ ನೀರಾವರಿ ನಿಗಮವನ್ನು ರದ್ದು ಮಾಡಿ, ನಿಗಮವು ಕೈಗೊಂಡಿರುವ ಯೋಜನೆಗಳನ್ನು ಸಣ್ಣ ನೀರಾವರಿ ಇಲಾಖೆಯ ವತಿಯಿಂದ ಶಕ್ಯತೆ ಮತ್ತು ಹಣದ ಲಭ್ಯತೆ ಆಧಾರದ ಮೇಲೆ ಕೈಗೊಳ್ಳಲು ಉದ್ದೇಶಿಸಲಾಗಿದೆ.

ಈ) ಉ) ಪರಿಶೀಲಿಸಲಾಗುವುದು.

ಹುಕ್ಕೇರಿ ತಾಲ್ಲೂಕಿನ ರಸ್ತೆ ಹಾಗೂ ಕಟ್ಟಡಗಳು

351 - ಶ್ರೀ ಉಮೇಶ ವಿ. ಕತ್ತಿ (ಹುಕ್ಕೇರಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?